ಜಿ.ಎಸ್. ಶಿವರುದ್ರಪ್ಪನವರು 'ಬೆಳಗಾಗೆದ್ದರೆ ಬಿಡುವ ಹೂಗಳಿದ್ದಂತೆ ಎಚ್‌ಎಸ್‌ವಿ ಪದ್ಯಗಳು' ಎಂದರು. ದೊಡ್ಡವರ ಈ ಪ್ರೀತಿ ಮತ್ತು ವಿಮರ್ಶೆ 'ನಾನು ಕವಿ ಇರಲೇಬೇಕು' ಎನ್ನುವ ವಿಶ್ವಾಸ ಬಲಗೊಳಿಸಿದವು.

◆ **ನೀವು ಪು.ತಿ.ನ., ಶಿವರುದ್ರಪ್ಪ, ನರಸಿಂಹಸ್ವಾಮಿ ಅವರಂಥ ಹಿರಿಯರ ಒಡನಾಟದಲ್ಲಿದ್ದವರು. ಅವರುಗಳ ಒಡನಾಟದಲ್ಲಿ ಏನನ್ನು ಕಲಿತಿರಿ?**

ಅಡಿಗರ ಕಾವ್ಯಶ್ರದ್ಧೆ ತುಂಬಾ ದೊಡ್ಡದು. ಅದು ನನ್ನನ್ನು ತುಂಬಾ ಪ್ರಭಾವಿಸಿತು. 'ಯಾವುದರಲ್ಲಿ ನೀನು ನಿನ್ನ ಪರಮ ಕರ್ತವ್ಯವನ್ನು ಸಾಧಿಸಲಿಕ್ಕೆ ಸಾಧ್ಯವಿದೆ ಎನ್ನುವುದನ್ನು ಕಂಡುಕೊಂಡು ಅದರಲ್ಲಿ ನಿನ್ನ ಜೀವನವನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ಸಾಧನೆ ಮಾಡು' ಎನ್ನುವುದು ಅಡಿಗರ ತತ್ವ. ಕವಿತೆಯ ಮೂಲಕವೇ ಸಾಯುಜ್ಯವನ್ನು ಪಡೆಯುವುದು ನನಗೆ ಸಾಧ್ಯ ಎಂದು ಬೇಗ ತಿಳಿಯಿತು. ಮಾಧ್ಯಮ ನಿಷ್ಠೆ, ಅದರ ಬಗ್ಗೆ ಗೌರವ, ವಿಶ್ವಾಸ, ಪರಂಪರೆಯ ಅರಿವು ರೂಢಿಸಿಕೊಳ್ಳಲು ಸಾಧ್ಯವಾಯಿತು. ಒಮ್ಮೆ ಅವರ ಮನೆಗೆ ಹೋದಾಗ ಅಡಿಗರು ಕಿಟೆಲ್ ನಿಘಂಟು ಓದುತ್ತಿದ್ದರು. 'ನಿಘಂಟು ಓದುತ್ತಿದ್ದೀರಲ್ಲ, ಏಕೆ?' ಎಂದು ಅಚ್ಚರಿಯಿಂದ ಪ್ರಶ್ನಿಸಿದೆ. 'ಬಿಡುವಿದ್ದಾಗಲೆಲ್ಲ ಕಿಟೆಲ್ ಓದ್ತೇನೆ. ಅಲ್ಲಿ ಅಪರೂಪದ ಶಬ್ದಮಣಿಗಳು ದೊರೆಯುತ್ತವೆ. ನಮ್ಮ ಯಾವುದೋ ಭಾವಕ್ಕೆ ತಕ್ಕನಾದ ಶಬ್ದ ಅಲ್ಲಿ ದೊರೆಯುತ್ತದೆ. ಕವಿಯಾದವನು ತನ್ನ ಶಬ್ದಸಂಪತ್ತನ್ನು ಹೆಚ್ಚು ಮಾಡಿಕೊಳ್ಳಬೇಕು ಅಂದರೆ ಕಿಟೆಲ್ ಓದ್ತಿರಬೇಕು' ಎಂದರು. ಅವರ ಮಾತು ನನಗೆ ಹೊಸ ಅರಿವನ್ನೇ ನೀಡಿತು. ನಮ್ಮ ಬಳಿ ಹತ್ತಾರು ರೂಪಕಗಳಿರಬಹುದು. ಆದರೆ ಅವುಗಳ ಬಗ್ಗೆ ಜಿಪುಣನಾಗಿರಬೇಕು ಎಂದು ಅಡಿಗರು ಹೇಳಿಕೊಟ್ಟರು. ಕವಿತೆಯ ಕಸುಬುದಾರಿಕೆಯ ಒಳಗುಟ್ಟುಗಳನ್ನು ಅವರೊಂದಿಗಿನ ಒಡನಾಟದಲ್ಲಿ ತಿಳಿಯಲು ಸಾಧ್ಯವಾಯಿತು.

ಜಿ.ಎಸ್. ಶಿವರುದ್ರಪ್ಪನವರಿಂದ ಕಲಿತದ್ದು ಶಿಸ್ತು. ಅವರ ಸಮಯದ ಪರಿಪಾಲನೆ ಅಪರೂಪದ್ದು. ಅವರು ನೂರಕ್ಕೆ ನೂರು ಪ್ರೊಫೆಸರ್. ಪೂರ್ವ ತಯಾರಿಯಿಲ್ಲದೆ ಏನನ್ನೂ ಮಾಡುತ್ತಿರಲಿಲ್ಲ. ಟಿಪ್ಪಣಿಯಿಲ್ಲದೆ ಸಭೆಯಲ್ಲಿ ಮಾತನಾಡುತ್ತಲೇ ಇರುತ್ತಿರಲಿಲ್ಲ. ಹಳಬರು ಹೊಸಬರು ಎಲ್ಲರನ್ನೂ ಓದಿಕೊಂಡಿದ್ದ ಕವಿ ಅವರು. ಜಾತಿ–ಧರ್ಮ ಎನ್ನದೆ ಬುದ್ಧಿವಂತರಾದ ಎಲ್ಲರನ್ನೂ ತಮ್ಮ ಹತ್ತಿರಕ್ಕೆ ತೆಗೆದುಕೊಳ್ಳುತ್ತಿದ್ದರು. ನನಗೂ ಒಂದು ಜಾಗ ಕೊಟ್ಟುಬಿಟ್ಟರಲ್ಲ – ಸೇಂಟ್ ಜೋಸೆಫ್ಸ್ ಕಾಲೇಜಿಗೆ ಹೋಗಪ್ಪ ನೀನು ಅಂತ.

ಪು.ತಿ.ನ. ಅವರು ಒಂದು ಬಗೆಯಲ್ಲಿ ಸಂತ. ಅವರನ್ನು 'ಸಂತ ಕವಿ' ಎಂದೇ ಕರೆಯುತ್ತೇನೆ. ಅವರಿಗೆ ನೇಮ–ನಿಷ್ಠೆ ಹೆಚ್ಚು. ನಾಮ ಹಾಕಿಕೊಳ್ಳುತ್ತಿದ್ದರು. ಗಂಟೆಗಟ್ಟಲೆ ಪೂಜೆ ಮಾಡುತ್ತಿದ್ದರು. ಪ್ರತಿದಿನ ಬೆಳಗ್ಗೆ ದೇವರ ಮುಂದೆ ಕೂತು ರಾಮಾಯಣ ಓದುತ್ತಿದ್ದರು. ಅವರಿಗದು ಬರಿ ಕಾವ್ಯವಲ್ಲ, ಭಕ್ತಿಯಷ್ಟೇ ಆಗಿರಲಿಲ್ಲ. ಕಾವ್ಯದ ಬಗ್ಗೆ ಅಗೌರವ ಇರಬೇಕು ಎನ್ನುತ್ತಿದ್ದರು. ಇದು ತುಂಬಾ ಅಪರೂಪ ಅಲ್ಲವಾ? ಕಾವ್ಯದ ಬಗ್ಗೆ ತುಂಬಾ ಗೌರವವಿದ್ದರೆ ಅದನ್ನು ಆಸ್ವಾದಿಸಲು ಸಾಧ್ಯವಾಗುವುದಿಲ್ಲ. ಕಾಳಿದಾಸನ 'ಗಿರಿಜಾ ಕಲ್ಯಾಣ' ಕಾವ್ಯವನ್ನು ಗಮನಿಸಿ. ಶಿವ–ಗಿರಿಜೆಯರ ಸಂಯೋಗವನ್ನು ಕಾಳಿದಾಸ ಅದ್ಭುತವಾಗಿ ರಸವತ್ತಾಗಿ ಚಿತ್ರವತ್ತಾಗಿ ವರ್ಣಿಸುತ್ತಾನೆ. ಅನೇಕ ವರ್ಷಗಳ ಕಾಲ ಮದುಮಗ–ಮದುಮಗಳು ಹಿಮಾಲಯದ ಒಂದು ಗುಹೆಯಲ್ಲಿರುತ್ತಾರೆ. ಶಿವ ಲೋಕಪಿತ,

